3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ

**CC 723/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಸುವರ್ಣ | **C.W –1** |
| ಗಂಡನ ಹೆಸರು | ಃ | ಪುನೀತ್ | **P.W –2** |
| ವಯಸ್ಸು | ಃ | 37 ವರ್ಷ | |
| ಉದ್ಯೋಗ | ಃ | ವ್ಯಾಪಾರ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಹಿರಿಸಾವೆ | ದಿನಾಂಕಃ **14.05.2024** |

---

ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಚಾ ಸಾ 2 ಮತ್ತು 3ರವರ ಪರಿಚಯವಿಲ್ಲ. ಚಾ ಸಾ 4 ರಿಂದ 9ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿದೆ.

ಸುಮಾರು 3 ವರ್ಷಗಳ ಹಿಂದೆ ನನ್ನ ಗಂಡ ಬೈಕಿನಲ್ಲಿ ಬಿದ್ದು ಏಟಾಗಿದ್ದು, ಅವರನ್ನು ನಾಗೇಶ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಿದ್ದೆವು. ನನ್ನ ಮಕ್ಕಳಾದ ಇಂಚರ ಮತ್ತು ಸಹನಾ ಅವರನ್ನು ಹಿರಿಸಾವೆಯ ನಮ್ಮ ಮನೆಯಲ್ಲಿ ಬಿಟ್ಟು ಬಂದಿದ್ದೆವು. ನಾನು ನನ್ನ ಅಕ್ಕನ ಮಗಳಾದ ಆರೋಪಿಗೆ ಕರೆ ಮಾಡಿ ನನ್ನ ಮಕ್ಕಳನ್ನು ಮನೆಯಿಂದ ಕರೆದುಕೊಂಡು ಅವರ ಮನೆಗೆ ಹೋಗುವಂತೆ ತಿಳಿಸಿರುತ್ತೇನೆ. ನಂತರ ನಾನು ನನ್ನ ಗಂಡನನ್ನು ಆಸ್ಪತ್ರೆಯಿಂದ ಆರೋಪಿಯ ಮನೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಆರೋಪಿಯ ಮನೆಯಿಂದ ನನ್ನ ತಾಯಿಯನ್ನು ನೋಡಲು ನಾನು, ನನ್ನ ಗಂಡ ಮತ್ತು ಮಕ್ಕಳು ದೊಡ್ಡಗನ್ನಿಯಲ್ಲಿರುವ ನನ್ನ ತಾಯಿಯ ಮನೆಗೆ ಹೋದೆವು. ಎರಡು ದಿನ ಬಿಟ್ಟು ನಾನು, ನನ್ನ ಗಂಡ ಮತ್ತು ಮಕ್ಕಳು ಹಿರಿಸಾವೆಯಲ್ಲಿರುವ ನನ್ನ ಮನೆಗೆ ಹೋದೆವು. ಸಂಜೆಯ ಹೊತ್ತಿಗೆ ಮನೆಗೆ ಸಾಮಾಗ್ರಿಗಳನ್ನು ತರಲು ಅಕ್ಕಿ ಡಬ್ಬದಲ್ಲಿ ಇಟ್ಟಿದ್ದ ಹಣವನ್ನು ತೆಗೆಯಲು ಹೋದಾಗ ಅಕ್ಕಿ ಡಬ್ಬದಲ್ಲಿ ಇಟ್ಟಿದ್ದ 80,000/- ರೂಪಾಯಿ ನಗದು ಹಣ, 9 ಗ್ರಾಂ ತೂಕದ ಚಿನ್ನದ ಕಿವಿ ಓಲೆ, ನನ್ನ ಗಂಡನ 6 ಗ್ರಾಂ ತೂಕದ ಚಿನ್ನದ ಉಂಗುರ ಕಳುವಾಗಿರುತ್ತದೆ. ನನ್ನ ಮಕ್ಕಳನ್ನು ವಿಚಾರಿಸಿದಾಗ ಮಕ್ಕಳು ಆರೋಪಿ ಡಬ್ಬವನ್ನು ತೆಗೆದಿರುತ್ತಾರೆ ಎಂದು ತಿಳಿಸಿರುತ್ತಾರೆ. ನಂತರ ನಾನು ಆರೋಪಿಗೆ ಕರೆ ಮಾಡಿ ವಿಚಾರಿಸಿರುತ್ತೇನೆ, ಆಗ ಆರೋಪಿಯು ನನ್ನಿಂದ ತಪ್ಪಾಗಿದೆ 1 ತಿಂಗಳು ಬಿಟ್ಟು ವಾಪಸ್ಸು

ಕೊಡುತ್ತೇನೆ ಎಂದು ತಿಳಿಸಿರುತ್ತಾಳೆ. ನನ್ನ ಅಕ್ಕ ಚಾ ಸಾ 4 ರಿಂದ 7 ರವರ ಮುಂದೆ 1 ತಿಂಗಳು ಬಿಟ್ಟು ವಾಪಸ್ಸು ಕೊಡುತ್ತೇನೆ ಎಂದು ಆರೋಪಿ ತಿಳಿಸಿರುತ್ತಾಳೆ. 1 ತಿಂಗಳಾದರೂ ಆರೋಪಿಯು ಚಿನ್ನವನ್ನು ಮತ್ತು ನಗದು ಹಣವನ್ನು ವಾಪಸ್ಸು ಕೊಟ್ಟಿರುವುದಿಲ್ಲ ನಂತರ 15 ದಿನಗಳ ನಂತರ ವಾಪಸ್ಸು ಕೊಡುತ್ತೇನೆ ಎಂದು ತಿಳಿಸಿದ್ದರು ಆದರೂ ಸಹ ಆರೋಪಿಯು ವಾಪಸ್ಸು ಕೊಟ್ಟಿರುವುದಿಲ್ಲ. ನಂತರ 2 ತಿಂಗಳು ಬಿಟ್ಟು ನಾನು ಪೋಲೀಸರಿಗೆ ದೂರು ಕೊಟ್ಟಿರುತ್ತೇನೆ.

ಆರೋಪಿಯ ಜೊತೆ ಮಾತನಾಡಿದ್ದನ್ನ ನಾನು ಮೊಬೈಲ್ ನಲ್ಲಿ ರೆಕಾರ್ಡ್ ಮಡಿಕೊಂಡಿದ್ದೆನು ಆದರೆ ಸದರಿ ರೆಕಾರ್ಡ್ ಡಿಲೀಟ್ ಆಗಿರುತ್ತದೆ. ಈ ಬಗ್ಗೆ ನಾನು ಪೋಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಕೃತ್ಯ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 5 ಎಂದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 5(ಎ) ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ 2 ದಿನಗಳ ನಂತರ ಪೋಲೀಸರು ನಮ್ಮ ಮನೆಗೆ ಬೆಳಿಗ್ಗೆ 09.00- 10.00 ಗಂಟೆ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಲು ಬಂದಾಗ ನಾನು ನಿ ಪಿ 5 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾ ಸಾ 10 ಮತ್ತು 11 ರವರು ಹಾಜರಿದ್ದರು. ಪೋಲೀಸರು ಕೃತ್ಯ ಸ್ಥಳಕ್ಕೆ ಬಂದು ಕೃತ್ಯ ಸ್ಥಳ ಮಹಜರ್ ಜರುಗಿಸಿದ್ದ ಬಗ್ಗೆ ಫೋಟೋಗಳನ್ನು ತೆಗೆದಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲು</u>** – ಶ್ರೀ ಎಂ ಎನ್ ಬಿ ಆರೋಪಿ ಪರ ವಕೀಲರಿಂದ

ನಾನು ಸುಮಾರು *7–8* ವರ್ಷಗಳಿಂದ ಪಾನಿಪುರಿ ಅಂಗಡಿಯನ್ನು ನಡೆಸುತ್ತಿದ್ದೇನೆ. ಕೊರೋನಾ ಸಮಯದ ನಂತರದಿಂದ ಅಷ್ಟಾಗಿ ವ್ಯಾಪಾರ ಇಲ್ಲ. ನನ್ನ ಗಂಡ ಮತ್ತು ನಾನು ಒಟ್ಟಾಗಿ ಪಾನಿಪುರಿ ಅಂಗಡಿಯನ್ನು ಇಟ್ಟುಕೊಂಡಿದ್ದೆವು. ನನ್ನ ಗಂಡ ಈಗ ಮೃತಪಟ್ಟಿದ್ದು, ನಾನು ಪಾನಿಪುರಿ ಅಂಗಡಿಯನ್ನು ಹಿರಿಸಾವೆಯಲ್ಲಿ ನಡೆಸುತ್ತಿದ್ದೇನೆ. ನನ್ನ ಗಂಡನಿಗೆ ಅಪಘಾತವಾದ ಬಗ್ಗೆ ನಾನು ಪೋಲೀಸರಿಗೆ ದೂರು ನೀಡಿಲ್ಲ. ನನ್ನ ಗಂಡನೇ ಬಿದ್ದಿದ್ದರಿಂದ ನಾವು ದೂರನ್ನು ನೀಡಿಲ್ಲ. ನನ್ನ ಗಂಡನು *4–5*

ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಆರೋಪಿಯನ್ನು ನಮ್ಮ ಮನೆಗೆ ಹೋಗುವಂತೆ ನಾನೇ ತಿಳಿಸಿರುತ್ತೇನೆ. ಆರೋಪಿಯು ನನ್ನ ಮಕ್ಕಳನ್ನು ಕರೆದುಕೊಂಡು ಅವರ ಮನೆಗೆ ವಾಪಸ್ಸು ಹೋಗಿರುತ್ತಾರೆ. ಆರೋಪಿಯು ಶ್ರೀನಿವಾಸಪುರದಲ್ಲಿ ವಾಸವಿರುತ್ತಾರೆ. ಆರೋಪಿಗೂ ಸಹ ಮದುವೆಯಾಗಿ ಅವರ ಗಂಡ ಮತ್ತು ಮಕ್ಕಳು ಶ್ರೀನಿವಾಸಪುರದಲ್ಲಿ ವಾಸವಿರುತ್ತಾರೆ. ನಮ್ಮ ಮನೆಯಲ್ಲಿ ಬೀರು ಇಲ್ಲದೇ ಇರುವುದರಿಂದ ನಾನು ಅಕ್ಕಿಡಬ್ಬದಲ್ಲಿ ಚಿನ್ನ ಮತ್ತು ಹಣವನ್ನು ಇಟ್ಟಿದ್ದೆನು. ಆರೋಪಿಯು ತನ್ನ ಗಂಡನ ಜೊತೆ ಚೆನ್ನಾಗಿಲ್ಲ ಎಂದರೆ ಸಾಕ್ಷಿಯು ಅಷ್ಟಕ್ಕೆ ಅಷ್ಟೆ ಎನ್ನುತ್ತಾರೆ. ಆರೋಪಿಗೆ ಶ್ರೀನಿವಾಸಪುರದಲ್ಲಿ ನಾನೇ ಮನೆ ಮಾಡಿಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿಯ ಗಂಡನಿಗೆ ಅಪಘಾತವಾಗಿತ್ತು ಎಂದರೆ ಸರಿ. ಆರೋಪಿಯು ಗಂಡನನ್ನು ಬಿಟ್ಟು ನನ್ನ ಜೊತೆಯೇ ವಾಸವಾಗಿದ್ದರು ಎಂದರೆ ಸರಿಯಲ್ಲ . ನಾನು ಆರೋಪಿಯನ್ನು ನನ್ನ ಮನಸೋಇಚ್ಛೆ ಕರೆಯುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನಿಗೆ ತಿಳಿಯದಂತೆ ಬೇರೆಕಡೆ ಹೋಗಬೇಕಾದರೆ ಆರೋಪಿಯ ಸಹಾಯ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ನನ್ನ ಸಹಾಯಕ್ಕೆ ನನ್ನ ಮನೆಯಲ್ಲಿ ಇಟ್ಟುಕೊಂಡಿದ್ದು ಆ ಸಮಯದಲ್ಲಿ ಆರೋಪಿಯ ಮೈದುನ ಮತ್ತು ಆರೋಪಿಯ ಗಂಡನ ಸಂಬಂಧಿ ಮಂಜುಳ ಅವರು ಹಿರಿಸಾವೆ ಪೋಲೀಸ್ ಠಾಣೆಗೆ ದೂರು ನೀಡಿ ವಾಪಸ್ಸು ಕಳುಹಿಸುವಂತೆ ತಿಳಿಸಿದ್ದರು ಎಂದರೆ ಆರೋಪಿಯು ಗಂಡನ ಜೊತೆ ಜಗಳ ಮಾಡಿಕೊಂಡು ಬಂದು ನಮ್ಮ ಮನೆಯಲ್ಲಿದ್ದು ಆರೋಪಿಯ ಗಂಡನ ಸಂಬಂಧಿಕರು ದೂರು ನೀಡಿದ ನಂತರ ಆರೋಪಿಯನ್ನು ವಾಪಸ್ಸು ಕಳುಹಿಸಿಕೊಟ್ಟಿರುತ್ತೇನೆ. ನಂತರವೂ ಸಹ ನಾನು ಆರೋಪಿಯನ್ನು ಬೆಳಗೊಳದಲ್ಲಿ ಮನೆ ಮಾಡಿ ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ .

ಕಳ್ಳತನವಾಗಿದೆ ಎಂದು ಹೇಳುವ ಹಣ ಮತ್ತು ಒಡವೆಗಳು ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ನನ್ನ ಅನೈತಿಕ ವ್ಯವಹಾರಗಳಿಗೆ ಬಳಸಿಕೊಂಡಿದ್ದು ಆರೋಪಿಯು ಅದನ್ನು ವಿರೋಧಿಸುತ್ತಿದ್ದರಿಂದ ನಾನು ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಕಳ್ಳತನವಾಗಿದೆ ಎಂದು ಹೇಳುವ ಸಮಯದಲ್ಲೂ ಸಹ ನಾನು ಆರೋಪಿಯನ್ನು ಅನೈತಿಕ ವ್ಯವಹಾರಗಳಿಗೆ ಬಳಸುತ್ತಿದ್ದು, ಆಕೆಯು ಅವುಗಳನ್ನು ವಿರೋಧಿಸುತ್ತಿದ್ದರಿಂದ ನಾನು ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಈಗಲೂ ಸಹ ನಾನು ಆರೋಪಿಯನ್ನು ಅನೈತಿಕ ವ್ಯವಹಾರಗಳನ್ನು ಮಾಡಲು ಪುಸಲಾಯಿಸಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿಯೇ ನಮ್ಮ ಮನೆಗೆ ಬಂದು ಜಗಳ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಮನೆಯಲ್ಲಿ ಯಾವುದೇ ಕಳ್ಳತನವಾಗದೇ ಇದ್ದರೂ ಸಹ ಪೋಲೀಸರೊಂದಿಗೆ ಶರೀಕ್ಕಾಗಿ ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದೇನೆ ಎಂದು ಹೇಳಿ ನಂತರ ಮರುಹೇಳಿಕೆಯಲ್ಲಿ ಸದರಿ ರೆಕಾರ್ಡ್ ಡಿಲೀಟ್ ಆಗಿರುತ್ತದೆ ಎಂದು ಹೇಳಿರುವುದೂ ಸಹ ಸುಳ್ಳು ಎಂದರೆ ಸರಿಯಲ್ಲ. ನಾನು ಈಗಲೂ ಸಹ ಪಾನಿಪುರಿ ಅಂಗಡಿಯನ್ನು ನಡೆಸದೇ ಚನ್ನರಾಯಪಟ್ಟಣದಲ್ಲಿ ಬಾಡಿಗೆ ಮನೆಯನ್ನು ಮಾಡಿಕೊಂಡು ಅನೈತಿಕ ವ್ಯವಹಾರದಲ್ಲಿ ತೊಡಗಿಕೊಂಡಿದ್ದೇನೆ ಎಂದರೆ ಸಾಕ್ಷಿಯು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈಗ್ಗೆ *2* ತಿಂಗಳಿನಿಂದ ನಾನು ಚನ್ನರಾಯಪಟ್ಟಣದಲ್ಲಿ ವಾಸವಿದ್ದೇನೆ ಎನ್ನುತ್ತಾರೆ. ಮಕ್ಕಳನ್ನು ಚನ್ನರಾಯಪಟ್ಟಣದ ಶಾಲೆಯಲ್ಲಿ ದಾಖಲಾತಿ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿಯು ಇನ್ನು ದಾಖಲಾತಿ ಮಾಡಿಕೊಳ್ಳಬೇಕು ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**Sd/-**
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ